ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೬೧	ಬೆಂಗಳೂರು, ಸೋಮವಾರ, ೦೫, ಜನವರಿ, ೨೦೨೬ (ಪುಷ್ಯ, ೧೫, ಶಕವರ್ಷ, ೧೯೪೭)	ಸಂಚಿಕೆ ೦೩
Volume 161	BENGALURU, MONDAY, 05, JANUARY, 2026 (PUSHYA , 15, SHAKAVARSHA, 1947)	Issue 03

ಭಾಗ ೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಜಿಲ್ಲಾಡಳಿತ ಭವನ, ಶಿಡ್ಲಘಟ್ಟ ರಸ್ತೆ, ಚಿಕ್ಕಬಳ್ಳಾಪುರ ಜಿಲ್ಲೆ - 562101

OFFICE OF THE DEPUTY COMMISSIONER, ZILLADALITHA BHAVANA, SHIDLAGHATTA ROAD, CHIKKABALLAPURA DISTRICT - 562101 (KARNATAKA)

ಸಂ: ಎಮ್.ಐ.ಎನ್/ ಸಿ.ಆರ್/ ಕೃಷರ್ ಅಧಿಸೂಚನೆ-03/ 2025-26 ದಿನಾಂಕ:-31/12/2025

: ಅಧಿಸೂಚನೆ :

ವಿಷಯ:- ಕರ್ನಾಟಕ ಕಲ್ಲು ಪುಡಿ ಮಾಡುವ ಘಟಕಗಳ ನಿಯಂತ್ರಣ ಅಧಿನಿಯಮ-2011 ರನ್ವಯ ಚಿಕ್ಕಬಳ್ಳಾಪುರ ಜಿಲ್ಲೆ ವ್ಯಾಪ್ತಿಯಲ್ಲಿ ಕೃಷರ್ ಸುರಕ್ಷಿತ ವಲಯ ಘೋಷಿಸುವ ಬಗ್ಗೆ.

ಉಲ್ಲೇಖ:- ದಿನಾಂಕ :-16/12/2025 ರಂದು ನಡೆದ ಜಿಲ್ಲಾ ಕಲ್ಲುಪುಡಿ ಮಾಡುವ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯ ನಡವಳಿಯಂತೆ

@@@@

ಕರ್ನಾಟಕ ಕೃಷರ್ ಘಟಕಗಳ (ಕೃಷರ್) ನಿಯಂತ್ರಣ ಅಧಿನಿಯಮ-2011 ರ ಕಲಂ-3(1) ರಂತೆ ಕೃಷರ್ ಪರವಾನಿಗೆ ಕೋರಿ ನಮೂನೆ 'ಎ' ಮತ್ತು 'ಎ1' ರಲ್ಲಿ ಅರ್ಜಿಯನ್ನು ಸಲ್ಲಿಸಿ, ಕಲಂ-6(3) ರಂತೆ ಕಂದಾಯ, ಅರಣ್ಯ, ಗಣಿ ಮತ್ತು ಭೂವಿಜ್ಞಾನ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಂದ ಜಂಟಿ ಸ್ಥಳ ತಪಾಸಣೆಯನ್ನು ಕೈಗೊಂಡು, ಕಲಂ-6(1) ರಂತೆ ಕೃಷರ್ ಸುರಕ್ಷಿತ ವಲಯ ಘೋಷಿಸಲು ನಿಗಧಿಪಡಿಸಿರುವ ಷರತ್ತುಗಳನ್ನು ಪೂರೈಸುತ್ತಿರುವ ಕೆಳಕಂಡ ಅರ್ಜಿತ ಪ್ರದೇಶವನ್ನು ದಿನಾಂಕ:-16/12/2025 ರಂದು ನಡೆದ ಜಿಲ್ಲಾ ಕೃಷರ್ ಘಟಕಗಳ ಲೈಸೆನ್ಸಿಂಗ್ ಮತ್ತು ನಿಯಂತ್ರಣ ಪ್ರಾಧಿಕಾರದ ಸಭೆಯ ನಿರ್ಣಯದಂತೆ, ಕರ್ನಾಟಕ ಕೃಷರ್ ಘಟಕಗಳ (ಕೃಷರ್) ನಿಯಂತ್ರಣ ಅಧಿನಿಯಮ-2011 ರ ಕಲಂ-6(3) ರಂತೆ ಕೃಷರ್ ಸುರಕ್ಷಿತ ವಲಯವೆಂದು ಘೋಷಿಸಲಾಗಿರುತ್ತದೆ.

ಕ್ರ.ಸಂ	ಕ್ರಷರ್ ಪರವಾನಿಗೆ ಅರ್ಜಿದಾರರ ಹೆಸರು	ತಾಲ್ಲೂಕು	ಗ್ರಾಮ	ಸ.ನಂ	ವಿಸ್ತೀರ್ಣ	ಜಮೀನಿನ ವಿವರ
01	ಮೆ|| ಆಪಲ್ ಸ್ಟೋನ್ ಕ್ರಷರ್	ಗುಡಿಬಂಡೆ	ವರ್ಲಕೊಂಡ	168	4-00 ಎಕರೆ	ಸರ್ಕಾರಿ
02	ಮೆ|| ಅಮೃತ ಸ್ಯಾಂಡರ್ಸ್	ಗುಡಿಬಂಡೆ	ವರ್ಲಕೊಂಡ	168	3-00 ಎಕರೆ	ಸರ್ಕಾರಿ

ಈ ಅಧಿಸೂಚನೆಯು ಅಸ್ತಿತ್ವದಲ್ಲಿರುವ ಕಂದಾಯ, ಅರಣ್ಯ, ಪರಿಸರ ಹಾಗೂ ಕರ್ನಾಟಕ ಕ್ರಷರ್ ಘಟಕಗಳ ಲೈಸೆನ್ಸಿಂಗ್ ಹಾಗೂ ನಿಯಂತ್ರಣ ಕಾಯ್ದೆಗಳ/ನಿಯಮಗಳ ಷರತ್ತುಗಳಿಗೆ ಮತ್ತು ಸರ್ಕಾರದಿಂದ ಕಾಲಕಾಲಕ್ಕೆ ಜಾರಿಯಾಗುವ ಆದೇಶಗಳು, ಸುತ್ತೋಲೆಗಳು, ಮಾರ್ಗಸೂಚಿಗಳು ಹಾಗೂ ನ್ಯಾಯಾಲಯಗಳ ಆದೇಶಗಳು ಮತ್ತು ಕ್ರಷರ್ ಘಟಕಗಳಿಗೆ ಸಂಬಂಧಿಸಿದಂತೆ ಇತರೇ ಇಲಾಖೆಗಳಿಂದ ಜಾರಿಯಾಗುವ ಆದೇಶಗಳಿಗೆ ಒಳಪಟ್ಟಿದ್ದು, ಕಂದಾಯ/ ಅರಣ್ಯ ಇಲಾಖೆಗಳ ದಾಖಲೆಗಳಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಲ್ಲಿ ಯಾವುದೇ ರೀತಿಯ ಮುನ್ಸೂಚನೆಯನ್ನು ನೀಡದೆ ಅಧಿಸೂಚನೆಯನ್ನು ರದ್ದುಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಜಿಲ್ಲಾ ಕ್ರಷರ್ ಘಟಕಗಳ ಲೈಸೆನ್ಸಿಂಗ್
ಹಾಗೂ ನಿಯಂತ್ರಣ ಪ್ರಾಧಿಕಾರ
ಚಿಕ್ಕಬಳ್ಳಾಪುರ ಜಿಲ್ಲೆ

PR-24

ಕರ್ನಾಟಕ ಸರ್ಕಾರ

<u>ತಹಶೀಲ್ದಾರ್ ರವರ ಕಾರ್ಯಾಲಯ ಮೊಳಕಾಲ್ಮೂರು ತಾಲ್ಲೂಕು</u>
<u>ಮೊಳಕಾಲ್ಮೂರು</u>

ನಂ:ಕಂದಾಯಗ್ರಾಮ:ಸಿಆರ್: 01/2024-25 **ದಿನಾಂಕ: 02/01/2026**

ನಮೂನೆ-2-ಜೆ
(9-ಸಿ ನಿಯಮದ 10ನೇ ಉಪನಿಯಮದ ಪ್ರಕಾರ)
<u>ತಿದ್ದುಪಡಿ</u> <u>ಅಧಿಸೂಚನೆ</u>

****

ವಿಷಯ : ಮೊಳಕಾಲ್ಮೂರು ತಾಲ್ಲೂಕು, ಕಸಬಾ ಹೋಬಳಿ ಪದಿನಾನ್ ದೇವರಹಟ್ಟಿ ಗ್ರಾಮಕ್ಕೆ ಸಂಬಂಧಿಸಿದಂತೆ ತಿದ್ದುಪಡಿ ಅಧಿಸೂಚನೆ ಹೊರಡಿಸುವ ಬಗ್ಗೆ.

ಉಲ್ಲೇಖ : ಕರ್ನಾಟಕ ರಾಜ್ಯ ಪತ್ರ ಸಂಪುಟ 160, ಸಂಚಿಕೆ 147 ದಿನಾಂಕ: 30/07/2025

****

ಕರ್ನಾಟಕ ಭೂ ಸುಧಾರಣಾ ಅಧಿನಿಯಮದ (1961) 38-ಎ ಕಲಂ (2) ರ ಉಪಕಲಂನ ಅಡಿಯಲ್ಲಿ ಹೊರಡಿಸದ ಆದೇಶದಂತೆ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ಉಪ ವಿಭಾಗದ

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

ಸಹಾಯಕ ಆಯುಕ್ತರ ಆದೇಶ ಸಂ. ಕಂದಾಯ ಗ್ರಾಮ ಸಿ.ಆರ್:01/2024-25 ದಿನಾಂಕ: 04/07/2024 ರಂತೆ ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು, ಕಸಬಾ ಹೋಬಳಿ ಪದಿನಾನ್ ದೇವರಹಟ್ಟಿ ಗ್ರಾಮದ ರಿ.ಸ.ನಂ: 23/3, 23/4, 23/7, 23/11 & 23/12 ರಲ್ಲಿರುವ ನಿವಾಸಿ /ನಿವಾಸಿಗಳು ವಾಸಗೃಹ ಮತ್ತು ಅದಕ್ಕೆ ಹೊಂದಿಕೊಂಡ ಜಮೀನಿನ ಮಾಲೀಕರೆಂದು ಅವರ ಹೆಸರಿನಲ್ಲಿ ನೊಂದಾಯಿಸಲಾಗಿದ ವಾಸಗೃಹ ಮತ್ತು ಅದಕ್ಕೆ ಹೊಂದಿಕೊಂಡ ಜಮೀನನ್ನು ಕಂದಾಯ ಗ್ರಾಮವನ್ನಾಗಿ ಪರಿವರ್ತಿಸಲು ಉಲ್ಲೇಖ ಪತ್ರದಂತೆ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಮುಂದುವರೆದು ಮೊಳಕಾಲ್ಮೂರು ತಾಲ್ಲೂಕು, ಕಸಬಾ ಹೋಬಳಿ ಪದಿನಾನ್ ದೇವರಹಟ್ಟಿ ಗ್ರಾಮಕ್ಕೆ ಸಂಬಂದಿಸಿದಂತೆ ರಿ.ಸ.ನಂ: 23/3, 23/4, 23/7, 23/11 ಖಾಸಗಿ ಜಮೀನುಗಳಾಗಿದ್ದು, ಸದರಿ ಖಾಸಗಿ ರಿಸನಂಗಳನ್ನು ಮಾತ್ರ 2ಇ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಅದರಂತೆಯೇ ನಮೂನೆ 2ಜೆ ಅಧಿಸೂಚನೆ ಹೊರಡಿಸಬೇಕಾಗಿದ್ದು ಕೈತಪ್ಪಿನಿಂದ ಸರ್ಕಾರಿ ರಿ.ಸ.ನಂ 23/12 ನ್ನು ಉಲ್ಲೇಖಿತ ರಾಜ್ಯ ಪತ್ರದಲ್ಲಿ ನಮೂದಿಸಲಾಗಿರುತ್ತದೆ. ಆದ್ದರಿಂದ ಸದರಿ ಸರ್ಕಾರಿ ರಿ.ಸ.ನಂ: 23/12ನ್ನು 2ಜೆ ಅಧಿಸೂಚನೆಯಿಂದ ಕೈಬಿಡಲಾಗಿದೆ ಎಂದು ತಿದ್ದಿಪಡಿ ಮಾಡಿ ಆದೇಶ ಹೊರಡಿಸಲಾಗಿದೆ.

ತಹಶೀಲ್ದಾರ್,
ಮೊಳಕಾಲ್ಮೂರು
ತಾಲ್ಲೂಕು

PR-25

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH